ಹಾಲನ್ನು ಚೆಲ್ಲಲು ಬಿಡದೆ ಜಾಗ್ರತೆ ವಹಿಸಿದಂತೆ ನನ್ನ ಜೀವನವನ್ನು ಉಳಿಸಿಕೊಳ್ಳಲಿಲ್ಲವೇಕೆ? ಮತ್ತೆ ನರೋತ್ತಮನ ನೆನಪಾಯಿತು. ಎಂಥಹ ಒಳ್ಳೆಯ ಮನುಷ್ಯ! ಸುಂದರ ಬದುಕು ತನ್ನದಾಗಬಹುದಿತ್ತು? ನನಗೇಕೆ ಮಂಕು ಬಡಿದಿತ್ತು? ಅಮ್ಮ ಹೇಳುವುದೆಲ್ಲ ಒಳ್ಳೆಯದಕ್ಕೆ ಎಂಬ ಕೆಟ್ಟ ಭ್ರಮೆ ನನ್ನ ಜೀವನವನ್ನೇ ಭಸ್ಮಗೊಳಿಸಿತ್ತೆ? ಎಷ್ಟು ಅವಕಾಶಗಳನ್ನು ಕೊಟ್ಟಿದ್ದರು?!

"ಐ ಮಿಸ್ ಯು ನರೋತ್ತಮ್..." ಚೀರಬೇಕೆನಿಸಿತು; ಕೇಳಿಸಿಕೊಳ್ಳಲು ಅವನು ಇಲ್ಲವಲ್ಲ? ಚಿಟಪಟ ಮಳೆ ನೋಡುವಾಗ ಕೊಡೈಕೆನಾಲ್ ನೆನಪಾಯಿತು. ಮದುವೆಯಾದ ಕೂಡಲೇ ಅಲ್ಲಿಗೆ ಹೋದದ್ದು. ಆ ಮಧುಚಂದ್ರ ಅದೆಷ್ಟು ಮಧುರ!

ಛೆ, ತಪ್ಪು ಮಾಡಿಬಿಟ್ಟೆ.

ಮಳೆಯ ಆರ್ಭಟ ನಿಂತಿರಲಿಲ್ಲ. ಯಾಕೋ ಚಳಿ ಅನ್ನಿಸಿ, ಸ್ವೆಟರ್‌ಗಾಗಿ ಬೀರು ತೆಗೆದೆ. ಒಪ್ಪವಾಗಿ ಜೋಡಿಸಿದ್ದ ನಾಲ್ಕೈದು ಸ್ವೆಟರ್‌ಗಳಲ್ಲಿ ನಾನು ಕೈ ಚಾಚಿದ್ದು ಅದೇ ಚೆರ್ರಿ ಪಿಂಕ್ ಕಡೆಗೆ. ಅಲ್ಲೇ ಕೊಂಡದ್ದು. ಅದನ್ನು ಏರಿಸಿ ಮತ್ತೆ ಮಳೆಯ ದೃಶ್ಯದೆಡೆ ಕಣ್ಣು ಹಾಯಿಸಿದೆ. ಗಗನವೇಕೊ ತನ್ನೆಲ್ಲ ಶೋಕ ಹೊರಹಾಕಿ ಅಳುತಿದೆ ಅನ್ನಿಸಿತು. ಅಷ್ಟೇ, ನನ್ನಲ್ಲಿ ಅಡಗಿದ್ದ ನೋವು ಒಮ್ಮೆಲೇ ಕಣ್ಣೀರಾಗಿ ಹರಿಯತೊಡಗಿತು ಹೊರಗಿನ ಮಳೆಗೆ ಪೈಪೋಟಿ ಎಂಬಂತೆ. ಅಲ್ಲಿ ಕೂರಲಾಗದೆ ರೂಮಿಗೆ ಬಂದು ಮಂಚದ ಮೇಲೆ ಬಿದ್ದುಕೊಂಡೆ. ಸದ್ದಿಲ್ಲದೇ ಸೋರುತ್ತಿದ್ದ ಕಣ್ಣೀರಿನ ಜೊತೆ ಬಿಕ್ಕು ಮೊದಲಾಯಿತು.

"ಐ ಸ್ಟಿಲ್ ಮಿಸ್ ಯು'' ಸನ್ನಿ ಬಡಿದಂತೆ ಒದರಿದೆ.

ಡ್ರೆಸ್ಸಿಂಗ್ ಟೇಬಲ್ ಮೇಲೆ ನಗುತಿದ್ದ ಫೋಟೊ ನನ್ನನ್ನು ನೋಡಿ ಅಣಕಿಸಿದಂತಾಯ್ತು.

★★★

ವರ್ಷ ಬರುವುದಕ್ಕೆ ಇನ್ನು ಸಮಯವಿದೆ. ನಾಳೆ ಸುಕೇಶಿನಿಯ ಮಗಳ ಮದುವೆಯ ಪ್ರಯುಕ್ತ ಹೂವೀಳ್ಯದ ಶಾಸ್ತ್ರ. ವರ್ಷ, ನಾನು ಕಲೆತು ಹೋಗುವುದು ಎಂಬ ಲೆಕ್ಕಾಚಾರ ಇದಕ್ಕೋಸ್ಕರವೇ ಚೆನ್ನೈಯಿಂದ ಬರುತ್ತಿದ್ದಾಳೆ. ಅವರಿಗೆ ಈ ವಿಷಯ ಗೊತ್ತಿಲ್ಲ; ನಾನೇ ಹೇಳಿಲ್ಲ ಏನೆಂದು ಹೇಳುವುದು?

ನೆನಪು ಮತ್ತೆ ಹಿಂದಕ್ಕೋಡಿತು, ಕಣ್ಣೊರೆಸಿಕೊಂಡೆ. ಎಷ್ಟೋ ಬಾರಿ ಹೀಗೆಯೇ ಕಣ್ಣೊರೆಸಿಕೊಂಡಿದ್ದೇನೆ. ಇದೇ ಮೊದಲು ಅಲ್ಲ ಅಥವಾ ಕೊನೆಯೂ ಆಗಿರಲಿಕ್ಕಿಲ್ಲ.

***

ನನಗೇನು ಮಂಕು ಬಡಿದಿತ್ತು? ನಾನು ಹಾಗೆ ದುರ್ಬಲಳಾಗಿದ್ದಾದರೂ ಯಾಕೋ ? ಈ ಪ್ರಶ್ನೆಗಳೆಲ್ಲ... ಬೋಡಿ ತುರುಬನ್ನು ನೆನೆದಂತೆ.

★★★

ಅಕ್ಕ, ಅಣ್ಣನ ನಂತರ ನಾನು, ನನ್ನ ಹಿಂದೆ ಹೈಸ್ಕೂಲ್‌ನಲ್ಲಿ ಓದುತ್ತಿದ್ದ ತಮ್ಮ. ನನಗೆ, ಪದವಿ ಮುಗಿಯುತ್ತಲೇ ಸರ್ಕಾರೀ ಉದ್ಯೋಗಕ್ಕೆ ಸಂದರ್ಶನ ಬಂದಿತ್ತು. ಅದಕ್ಕೂ ಮೊದಲು ನರೋತ್ತಮನ ಮನೆಯವರು ನನ್ನನ್ನು ನೋಡಿದ್ದರು. ಜೋಯಿಸರು ಹೇಳಿದ್ದರು: "ಹುಡುಗನ ಮನೆಯವರದ್ದು ಯಾವುದೇ ನಿರ್ಬಂಧವಿಲ್ಲ, ಸೊಸೆ ನೌಕರಿಗೆ ಹೋಗಬಾರದು, ಮನೆತುಂಬ ಓಡಾಡಿಕೊಂಡಿದ್ದರೆ ಸಾಕು." ನನಗೂ ಅದು ಸರಿಯೆನ್ನಿಸಿತ್ತು, ನನ್ನ ಗೆಳತಿಯರಲ್ಲಿ ಕೆಲವರು ಆಗಲೇ ಮದುವೆಯಾಗಿ, ಗೃಹಿಣಿಯರಾಗಿ ಸುಖ ಬಾಳ್ವೆ ನಡೆಸುತ್ತಿದ್ದರಲ್ಲ!

ಆಗ ತಲೆಯಾಡಿಸಿದ್ದ ಅಮ್ಮ, ಸಂದರ್ಶನದ ದಿನ ನನಗಿಂತ ಅವಳೇ ಮುತುವರ್ಜಿ ತೋರಿದ್ದಳು. "ಗಂಡಿನ ಮನೆಯವರು ಕೆಲಸಕ್ಕೆ ಹೋಗೋದು ಬೇಡ ಅಂದಿದ್ದಾರಲ್ಲ?" ಎಂದಿದ್ದಕ್ಕೆ, "ಸರ್ಕಾರೀ ಕೆಲಸ, ನಿಮ್ಮಪ್ಪನ ಪೌರೋಹಿತ್ಯದಲ್ಲಿ ನಮ್ಮ ಮನೆಯ ಒಲೆ ಉರೀತಿದ್ದದ್ದು ನೀನೇ ನೋಡಿದ್ದೀಯ,